**ದಿನಾಂಕ: 21.12.2020 ರಂದು ಬೆಳಿಗ್ಗೆ 11-45ಗಂಟೆಗೆ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್-178 (ಸಾರಕ್ಕಿ) ನಡೆದ ಸಭೆಯ ನಡಾವಳಿಗಳು:**

## : ಚರ್ಚೆಯಾದ ವಿಷಯಗಳು :

1. ವಾಡ್-178ರಲ್ಲಿನ ಸಾರ್ವಜನಿಕರ ಎಲ್ಲಾ ರೀತಿಯ ಕುಂದುಕೊರತೆಗಳ ಬಗ್ಗೆ, ಅಭಿವೃದ್ಧಿ ಕಾಮಗಾರಿಗಳು ಹಾಗೂ ಘನತ್ಯಾಜ್ಯ ನಿರ್ವಹಣೆ ಮತ್ತು ಕೊವಿಡ್-19ರ ಬಗ್ಗೆ ಚರ್ಚಿಸುವ ಕುರಿತು.
2. ಅಧ್ಯಕ್ಷರ ಅಪ್ಪಣೆಯ ಮೇರೆಗೆ ಚರ್ಚಿಸುವಂತಹ ಇತರೆ ವಿಷಯಗಳು.

## : ಸಭೆಗೆ ಹಾಜರಾಗಿದ್ದವರ ವಿವರಗಳು :

| | |
|---|---|
| **ಅಧ್ಯಕ್ಷರು** | ನೋಡಲ್ ಅಧಿಕಾರಿ |
| **ಸದಸ್ಯ ಕಾರ್ಯದರ್ಶಿ** | ವಾರ್ಡ್ 178ರ ಸಹಾಯಕ ಅಭಿಯಂತರರು |
| **ಸದಸ್ಯರುಗಳು** | ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು |
| **ಸದಸ್ಯರುಗಳು** | ಬಿಡಬ್ಲ್ಯೂಎಸ್ಎಸ್‌ಬಿ ಅಭಿಯಂತರರು |
| **ಸದಸ್ಯರುಗಳು** | ಜೆ.ಪಿ.ನಗರ ಸಹಾಯಕ ಕಂದಾಯ ಅಧಿಕಾರಿಗಳು |
| **ಸದಸ್ಯರುಗಳು** | ತೋಟಗಾರಿಕಾ ಅಧೀಕ್ಷಕರು (ದಕ್ಷಿಣ) |
| **ಸದಸ್ಯರುಗಳು** | ಬೆಸ್ಕಾಂ ಅಧಿಕಾರಿಗಳು |
| **ಸದಸ್ಯರುಗಳು** | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ರೋಡ್ ಇನ್‌ಫ್ರಾ) |
| **ಸದಸ್ಯರುಗಳು** | ಸಹಾಯಕ ಅಭಿಯಂತರರು, (ಬೀದಿ ದೀಪ ನಿರ್ವಹಣೆಗಾರರು) |
| **ಸದಸ್ಯರುಗಳು** | ಜೆ.ಪಿ.ನಗರ ಪೋಲಿಸ್ ಠಾಣಾಧಿಕಾರಿಗಳು |
| **ಸದಸ್ಯರುಗಳು** | ಡಾ॥ ಗೀತಾ, ವೈದ್ಯರು ಜೆ.ಪಿ.ನಗರ UPHC |
| **ಸದಸ್ಯರುಗಳು** | ಅರಣ್ಯ ಇಲಾಖೆ ಅಧಿಕಾರಿಗಳು |
| **ಸದಸ್ಯರುಗಳು** | ಟಿ.ಎಸ್. ಅನಂತ ರಾಮನ್, ಎನ್.ಜಿ.ಓ. |
| **ಸದಸ್ಯರುಗಳು** | ಜೆ.ಪಿ.ನಗರ 2ನೇ ಹಂತ ನಾಗರೀಕ ಕಲ್ಯಾಣ ಸಂಘದ ಸದಸ್ಯರು ಹಾಗೂ ನಾಗರೀಕರು |

## :ನಡಾವಳಿಯ ವರದಿ:

- ಅಧ್ಯಕ್ಷರಾದ ಡಾ॥ ದೇವಿಕ ರಾಣಿರವರು ಮಾತನಾಡುತ್ತಾ ಹಿಂದಿನ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಬಗ್ಗೆ ಅಧಿಕಾರಿಗಳು ಕೈಗೊಂಡ ಕ್ರಮಗಳ ಬಗ್ಗೆ ಕೇಳಲಾಯಿತು. ಸದರಿ ಸಂಬಂಧ ಧನ್ವಂತರಿ ಪಾರ್ಕ್‌ನಲ್ಲಿ ಇದ್ದ ಹಳೆಯ ಫೈಬರ್ ಆಟಿಕೆಗಳನ್ನು ವಾರ್ಡ್ ಇಂಜಿನಿಯರ್ ತೆರವುಗೊಳಿಸಿರುವ ಬಗ್ಗೆ ಹಾಗೂ ಅರಣ್ಯ ಇಲಾಖೆ ಮತ್ತು ತೋಟಗಾರಿಕೆ ರವರು ಮರ ಹಾಗೂ ಎಲೆಗಳನ್ನು ತೆರವುಗೊಳಿಸಿರುವ ಬಗ್ಗೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು ಹಾಗೂ ಪಕ್ಕದ ಖಾಲಿ ನಿವೇಶನವನ್ನು ಶುಚಿಗೊಳಿಸಲಾಗಿರುವುದಾಗಿ ಹರ್ಷ ವ್ಯಕ್ತಪಡಿಸಿದರು.

*ಪು.ತಿ.ನೋ.*

- ಪಾಲಿಕೆಯ ವಿದ್ಯುತ್ ವಿಭಾಗದಿಂದ ಮಕ್ಕಳು ಆಟದ ಮೈದಾನದಲ್ಲಿ ಒಂದು ದೀಪವನ್ನು ಅಳವಡಿಸಿರುವುದಕ್ಕೆ ಧನ್ಯವಾದ ಹೇಳಿದರು ಹಾಗೂ ಮತ್ತೊಂದು ದೀಪವನ್ನು ಹಾಕಿಕೊಡಲು ಕೋರಿದರು.
- ಬೆಸ್ಕಾಂ ವಿಭಾಗದಿಂದ ಯುಜಿಡಿ ಕೇಬಲ್ ಅಳವಡಿಸಲು ಅಗೆದಿರುವ ಭಾಗಗಳನ್ನು ಮುಚ್ಚಿರುವುದಾಗಿ ತಿಳಿಸಿದರು.

**<u>ಸದರಿ ಸಭೆಯಲ್ಲಿ ಕಸ ವಿಲೇವಾರಿ ಸಮಸ್ಯೆ ಹಾಗೂ ಇತರೇ ದೂರುಗಳ ಬಗ್ಗೆ ಕುರಿತು ಈ ಕೆಳಕಂಡಂತೆ ಪ್ರಸ್ತಾಪಿಸಲಾಯಿತು.</u>**

- ಧನ್ವಂತರಿ ಉದ್ಯಾನವನದಲ್ಲಿ ಔಷಧಿ ಸಸಿಗಳನ್ನು, ಪಾರ್ಕ್‌ನ ಸ್ವಚ್ಛತೆ ಬಗ್ಗೆ, ಸಹಾಯವಾಣಿ ನಂಬರ್‌ನ ನಾಮಫಲಕ ಹಾಗೂ ಕೋವಿಡ್-19ರ ಅರಿವು ಮೂಡಿಸುವ ನಾಮಫಲಕಗಳನ್ನು ಅಳವಡಿಸುವಂತೆ ಸೂಚಿಸಲಾಯಿತು.
- 20ನೇ ಮುಖ್ಯರಸ್ತೆ, ಜೆ.ಪಿ.ನಗರ 2ನೇ ಹಂತದ ಧನ್ವಂತರಿ ಪಾರ್ಕಿನ ಹಿಂಭಾಗದಲ್ಲಿರುವ ಕಸದ ರಾಶಿಯನ್ನು ತೆರವುಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.
- 15ನೇ ಅಡ್ಡರಸ್ತೆ ವಿಇಟಿ ಆಟದ ಮೈದಾನ ಹಾಗೂ ದುರ್ಗಾ ಪರಮೇಶ್ವರಿ ದೇವಸ್ಥಾನದ ಆಟದ ಮೈದಾನದಲ್ಲಿ ಸಾರ್ವಜನಿಕರಿಗೆ ಶೌಚಾಲಯವನ್ನು ನಿರ್ಮಾಣ ಮಾಡಿಕೊಡುವಂತೆ ಚರ್ಚಿಸಲಾಯಿತು.
- ಧನ್ವಂತರಿ ಪಾರ್ಕಿನ ಉದ್ಯಾನವನದಲ್ಲಿ ದುರಸ್ಥಿಗೊಂಡಿರುವ ಲೈಟ್‌ಗಳನ್ನು ಸರಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.
- 12ನೇ ಅಡ್ಡರಸ್ತೆ, ಎಸ್.ಎನ್. ಹೋಟೆಲ್ ಹತ್ತಿರ ಧೂಮಪಾನ ಹಾಗೂ ತಿಂಡಿಯನ್ನು ರಸ್ತೆಬದಿಯಲ್ಲಿಯೇ ಕುಳಿತು ತಿನ್ನುತ್ತಿರುವುದಾಗಿ ಕ್ರಮ ಕೈಗೊಳ್ಳಲು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.
- 17ನೇ ಮುಖ್ಯರಸ್ತೆ, 14ನೇ ಅಡ್ಡರಸ್ತೆಯ ಕಾರ್ನರ್‌ನಲ್ಲಿ ಮಟನ್ ಮತ್ತು ಚಿಕನ್ ಅಂಗಡಿಯನ್ನು ನಡೆಸುತ್ತಿರುವವರು ಮೂಳೆ-ಮಾಂಸಗಳನ್ನು ಚರಂಡಿ ಮೋರಿಯಲ್ಲಿ ಹಾಕುತ್ತಿರುವ ಬಗ್ಗೆ ಕ್ರಮ ಕೈಗೊಳ್ಳಲು Animal husbandry ಅಧಿಕಾರಿಗಳಿಗೆ ತಿಳಿಸಲಾಯಿತು.
- 21ನೇ ಮುಖ್ಯರಸ್ತೆ, ಧನ್ವಂತರಿ ಪಾರ್ಕಿನ ಹತ್ತಿರ ಪಾದಚಾರಿ ಮಾರ್ಗವು ದುರಸ್ಥಿಪಡಿಸುವಂತೆ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಲಾಯಿತು.
- ಪಾರ್ಕಿನ ನಿರ್ವಹಣೆ, ಸೆಕ್ಯುರಿಟಿ ಗಾರ್ಡನ್ ರವರು ನಿಯೋಜಿಸಿರುವ ಆದೇಶದ ಪ್ರತಿಯನ್ನು ಕೋರಲಾಯಿತು.
- ಧನ್ವಂತರಿ ಉದ್ಯಾನವನದಲ್ಲಿ ಶೌಚಾಲಯದ ನಿರ್ವಹಣೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವಂತೆ ಸೂಚಿಸಲಾಯಿತು.

- ಕೊನೆಯದಾಗಿ ಮಾನ್ಯ ಅಧ್ಯಕ್ಷರು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಸಾರ್ವಜನಿಕರಿಗೆ ವಂದನೆಯನ್ನು ತಿಳಿಸುತ್ತಾ ಇನ್ನು ಮುಂದೆ ಪ್ರತಿ ತಿಂಗಳು ಮೊದಲ ಶನಿವಾರ ಹಾಗೂ ಮೂರನೇ ಶನಿವಾರ ಬೆಳಿಗ್ಗೆ 11.45 ಕ್ಕೆ ಇದೇ ರೀತಿಯಾಗಿ ಮಾಸಿಕ 2 ಬಾರಿ ವಾರ್ಡ್ ಸಮಿತಿ ಸಭೆ ನಡೆಯುವುದಾಗಿ ತಿಳಿಸಿ ಮುಂದಿನ ಸಭೆಗಳಿಗೆ ಈ ವಾರ್ಡಿನ ವ್ಯಾಪ್ತಿಗೆ ಬರುವ ಎಲ್ಲಾ ಇಲಾಖೆಗಳ ಅಧಿಕಾರಿಗಳನ್ನು ಸದರಿ ಸಭೆಗೆ ಮಾಹಿತಿಗಳೊಂದಿಗೆ ಹಾಜರಾಗುವಂತೆ ಕೋರಿ ಪತ್ರ ಬರೆಯಲು ಸದಸ್ಯ ಕಾರ್ಯದರ್ಶಿ ರವರಿಗೆ ಸೂಚಿಸಿದರು. ಹಾಗೂ ಗೈರು ಹಾಜರಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲು ಮಾನ್ಯ ಆಯುಕ್ತರವರಿಗೆ ಸೂಚಿಸಲಾಗುವುದೆಂದು ತಿಳಿಸಿದರು.

- ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರಾದ ಶ್ರೀ ರಾಮು .ಎಸ್, ವಾರ್ಡ್ 178 ಸಾರಕ್ಕಿ, ಸಭೆಗೆ ಹಾಜರಾದ ಎಲ್ಲಾ ಸದಸ್ಯರಿಗೂ ಹಾಗೂ ಅಧಿಕಾರಿಗಳು/ನೌಕರರಿಗೂ ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಧ್ಯಕ್ಷರು**
**ವಾರ್ಡ್ ಸಮಿತಿ, ವಾರ್ಡ್ ನಂ. 178**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**